1	2	3
8	ಬಳ್ಳಾರಿ Bellary	2
9	ಮಂಡ್ಯ Mandya	18
10	ಹಾಸನ Hassan	19
11	ಶಿವಮೊಗ್ಗ Shimoga	4
12	ಉಡುಪಿ Udupi	4
	ಒಟ್ಟು **Total**	**144**

ಪುರಸಭೆಗಳಿಗೆ ಆರ್ಥಿಕ ಮುಗ್ಗಟ್ಟು

1085 (1261) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಕ್ಟ್ರಾಯ್ ತೆರಿಗೆಯನ್ನು ರದ್ದುಪಡಿಸಿದಾಗಿನಿಂದ ಪುರಸಭೆಗೆ ಆರ್ಥಿಕ ತೊಂದರೆ ಆಗುತ್ತಿರುವ ಸಂಗತಿ ನಿಜವೆ;

ಆ) ಆರ್ಥಿಕ ಮುಗ್ಗಟ್ಟಿನಿಂದಾಗಿ ಪಟ್ಟಣ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ನಗರಸಭೆಯವರಿಗೆ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇಂತಹ ಪುರಸಭೆಗಳಿಗೆ ಸಚಿವರ ವಿವೇಚನಾ ನಿಧಿಯಿಂದ ಹಣ ಬಿಡುಗಡೆ ಮಾಡಲಾಗುವುದೆ;

ಇ) ಬೆಳಗಾಂ ಜಿಲ್ಲೆ ಬೈಲಹೊಂಗಲ ನಗರ ಸಭೆಯ ವಿಸ್ತರಣಾ ಪ್ರದೇಶದಲ್ಲಿ ಹಾಗೂ ನಗರದ ಒಳಗೆಗಳಲ್ಲಿ ಗಟಾರ ಮಾಡಿ ಡಾಂಬರೀಕರಣ ಮಾಡದೇ ಇದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ ಈ ರಸ್ತೆಗಳನ್ನು ಅಭಿವೃದ್ಧಿ ಪಡಿಸಿ ಕುಡಿಯುವ ನೀರಿನ ಯೋಜನೆ ಕೈಗೊಳ್ಳಲು ಸಚಿವರ ವಿವೇಚನಾ ನಿಧಿಯಿಂದ ೫೦ ಲಕ್ಷ ರೂ. ಗಳನ್ನು ಮಂಜೂರು ಮಾಡಲು ಸರ್ಕಾರಿ ಕ್ರಮ ಕೈಗೊಳ್ಳುವುದೆ;

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಇಲ್ಲ

ಆ) ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಲಭ್ಯವಾಗುವ ಹಣದಲ್ಲಿ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿವೇತನಕ್ಕಾಗಿ ಬೇಕಾಗುವ ಹಣ ಕೆಷಿ ಟಿಸಿಎಲ್ ನಿಗಮಕ್ಕೆ ಸ್ಥಳೀಯ ಸಂಸ್ಥೆಗಳ ಮತಿಯಿಂದ ಜಾಮತಿಸ ಬೇಕಾದ ವಿದ್ಯುತ್ ವೆಚ್ಚದ ಬಾಬ್ತು, ಕೆಯು ಡಬ್ಲ್ಯೂಯುಡಿಬಿ ಮತಿಯಿಂದ ಸ್ಥಳೀಯಸಂಸ್ಥೆಗಳಿಗೆ ನೀರು ಸರಬರಾಜು ಮಾಡಲಾದ ವೆಚ್ಚದ ಬಾಬ್ತು ಇವುಗಳನ್ನು ಹೊರತುಪಡಿಸಿ ಹಣ ಲಭ್ಯವಾದರೆ ಇಂತಹ ಬೇಡಿಕೆಗಳನ್ನು ಪರಿಗಣಿಸಲಾಗುವುದು.

ಇದಲ್ಲದೆ ನಗರ ಸ್ಥಳೀಯ ಸಂಸ್ಥೆಗಳು ಸಹ ತಮ್ಮ ವ್ಯಾಪ್ತಿಯಲ್ಲಿ ಲಭ್ಯವಿರುವ ಸ್ಥಳೀಯ ತೆರಿಗೆಗಳನ್ನು ಅಂದರೆ ಆಸ್ತಿ ತೆರಿಗೆಯಂತಾದವುಗಳನ್ನು ಪೂರ್ಣವಾಗಿ ವಸೂಲು ಮಾಡಿ ತಮ್ಮ ಪುರಸಭೆಗೆ ಕೆಲಸ ಕಾರ್ಯಗಳನ್ನು ಸುಗಮವಾಗಿ ನಿರ್ವಹಿಸಲು ಜವಬ್ದಾರಿಯನ್ನು ಹೊಂದಿರುತ್ತದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ. ಈ ಇಲಾಖೆಯಲ್ಲಿ ಮಂಜೂರು ಮಾಡಲು ಯಾವುದೇ ವಿಶೇಷವಾದ ನಿಧಿ ಇರುವುದಿಲ್ಲ.

ಈ) ಪರಿಶೀಲಿಸಲಾಗುವುದು.

ರಾಣಿಬೆನ್ನೂರು ಮ್ಯಾಡಗಿ ಪಟ್ಟಣಗಳಿಗೆ ಕುಡಿಯುವ ನೀರಿನ ವ್ಯವಸ್ಥೆ

1086 (1301) ಶ್ರೀ ಕೋಳಿವಾಡ ಕೃಷ್ಣಭೀಮಪ್ಪ (ರಾಣಿಬೆನ್ನೂರು): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣಿಬೆನ್ನೂರು ಹಾಗೂ ಮ್ಯಾಡಗಿ ಪಟ್ಟಣಗಳ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿದೆ?

ಆ) ಈ ಯೋಜನೆ ಯಾವಾಗ ಮಂಜೂರು ಆಗಿದೆ ?

ಇ) ಇದನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ ?

ಶ್ರೀ ಬಿ. ಜಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು)

ಅ) ರಾಣಿಬೆನ್ನೂರು : ರಾಣಿಬೆನ್ನೂರು ನೀರು ಸರಬರಾಜು ಯೋಜನೆಯಡಿ, ಮೂಲ ಸ್ಥಾವರದ ಕೆಲಸ, ಮಂಜೂರು ಜಲಶುದ್ಧೀಕರಣಾಗಾರ. ಸಿಬ್ಬಂದಿ ವಸತಿಗೃಹ ಪೂರ್ಣಗೊಂಡಿದೆ. ಜಲ ಶುದ್ಧೀಕರಣಾಗಾರದ ಕೆಲಸ ಬಹುಪಾಲು ಪೂರ್ಣಗೊಂಡಿದ್ದು, ಮಧ್ಯಂತರ ಪಂಪ್ಹೌಸ್ ನಿಂದ ರಾಣಿಬೆನ್ನೂರು ಪಟ್ಟಣದವರೆಗೆ ಅಳವಡಿಸಬೇಕಾದ 8.34 ಕಿ.ಮೀ. ಕೊಳವೆ ಸರಬರಾಜು ಮಾಡಿ, 6840 ಮಿ ಉದ್ದದ ಕೊಳವೆ ಮಾರ್ಗ ಈಗಾಗಲೇ ಅಳವಡಿಸಲಾಗಿದೆ. ಮೂಲಸ್ಥಾನ, ಮಧ್ಯಾಂತರದಂಪುಮನೆ ಹಾಗೂ ಜಲಶುದ್ಧೀಕರಣಾಗಾರದಲ್ಲಿ ಪಂಪುಗಳನ್ನು ಅಳವಡಿಸಲು ಗುತ್ತಿಗೆದಾರರನ್ನು ನೇಮಿಸಲಾಗಿದ್ದು, ಕೆಲಸವು ಪ್ರಗತಿಯಲ್ಲಿದೆ. ಮೂಲಸ್ಥಾವರದಿಂದ, ಮಧ್ಯಂತರ ಪಂಪು